ತಪ್ಪದಂತೆ ನಡೆದುಕೊಳ್ಳುತ್ತಿದ್ದರು. ರಂಗಭೂಮಿ ಎಂದರೆ ಒಂದೇ. ಸಮಯಕ್ಕೆ ಸರಿಯಾಗಿ ಹೋಗುತ್ತಿದ್ದರು. ಪೂರ್ವಭಾವಿಯಾಗಿ ಸಾಕಷ್ಟು ರಿಹರ್ಸಲ್ ಮಾಡುತ್ತಿದ್ದರು. ಅವರಿಗೆ ಹೆಚ್ಚಿನ ಶ್ರದ್ಧೆ ಇತ್ತು. ಆದರೆ ಇಂದಿನ ಕಲಾವಿದರಲ್ಲಿ ಕೆಲವರು ರಿಹರ್ಸಲ್‌ಗೆ ಹೋಗದೆಯೂ ಮನೆಯಲ್ಲಿಯೇ ತಯಾರಾಗಿರುತ್ತಾರೆ. ನಾಟಕ ನಡೆಯುವ ದಿನವೇ ಹಳ್ಳಿಗಳಿಗೆ ಹೋಗಿ ಅಲ್ಲಿ ತಮ್ಮ ಪಾತ್ರದ ಮಾತುಗಳನ್ನು ಸನ್ನಿವೇಶಕ್ಕೆ ಬದಲಾಯಿಸಿ ಹೇಳಿಬಿಡುತ್ತಾರೆ. ಪಾತ್ರಗಳಿಗೆ ಜೀವ ತುಂಬುವಂತೆ ಹಾಡುವವರೂ ಇದ್ದಾರೆ. ಸಂಬಂಧವಿಲ್ಲದ ಹಾಡುಗಳನ್ನು ಹಾಡುವವರೂ ಇದ್ದಾರೆ. ಇನ್ನೂ ಕೆಲವರು ಇಂದಿನ ಆಧುನಿಕ ತಂತ್ರಜ್ಞಾನವನ್ನು ಬಳಸಿ ಪಾತ್ರಕ್ಕೆ ಮೆರುಗು ತರುವವರೂ ಇದ್ದಾರೆ. ಕಾಲ ಅನೇಕ ಅನುಕೂಲಗಳನ್ನು ದೊರಕಿಸಿದೆ. ಹಳ್ಳಿಗಾಡಿನ ನಾಟಕವಾಡುವ ಬಹುತೇಕ ಹವ್ಯಾಸಿ ಕಲಾವಿದರು ಈ ಕ್ಷೇತ್ರದ ಬಗ್ಗೆ ಅಷ್ಟಾಗಿ ತಿಳಿಯದವರು. ನಾಟಕದಲ್ಲಿ ಮಾತು ತಪ್ಪಿದರೆ ಅವರಿಗೆ ಹೇಳಿಕೊಟ್ಟು ನಮ್ಮೊಂದಿಗೆ ಕರೆದೊಯ್ಯಬೇಕು. ಇಂತಹ ಗುಣಗಳನ್ನು ಹಿರಿಯರಿಂದ ನಾವು ಕಲಿತಿದ್ದು. ಕಲಿಯಬೇಕಾದ್ದು ಬಹಳವಿದೆ.

**◆ ಹಳ್ಳಿಗಳಲ್ಲಿ ನಾಟಕ ಆಡಿಸುವ ರಂಗಾಸಕ್ತರೊಂದಿಗಿನ ಸಂಬಂಧಗಳನ್ನು ಕುಟುಂಬದವರಂತೆ ಈಗಲೂ ಪೊರೆದುಕೊಂಡು ಬಂದಿರುವಿರಿ ಎಂಬ ಪ್ರತೀತಿ ಇದೆ. ಆದರೂ ನಾಟಕ ಕ್ಷೇತ್ರದ ಅಭಿನಯ ನಿಮಗೊಂದು ವೃತ್ತಿ. ಸಂಭಾವನೆಗಾಗಲೀ, ರಂಗದ ಮೇಲಿನ ಅನವಶ್ಯಕ ಸಂಗತಿಗಳಿಗಾಗಲೀ ತಕರಾರು ಮಾಡಿದ ಪ್ರಸಂಗಗಳಿವೆಯೇ. ನಿಮ್ಮನ್ನು ಬಲ್ಲವರು ಸಭ್ಯ ಕಲಾವಿದೆ ಎನ್ನುತ್ತಾರಲ್ಲ? ಇದು ಎಲ್ಲ ಕಲಾವಿದರಿಗೂ ಅನ್ವಯಿಸುತ್ತದೆಯೇ?**

ಎಲ್ಲ ಕಲಾವಿದರಿಗೂ ಅನ್ವಯಿಸಬೇಕು. ಅಂತಹ ನಡೆಯನ್ನು ನಾವು ರೂಢಿಸಿಕೊಳ್ಳಬೇಕು. ಹಳ್ಳಿಯಲ್ಲಿ ಕೆಲವು ಕಡೆ ತುಂಬಾ ಮುಗ್ಧರಿರುತ್ತಾರೆ. ಅವರನ್ನು ದುರುಪಯೋಗ ಪಡಿಸಿಕೊಳ್ಳಬಾರದು. ತಿಳಿದೋ ತಿಳಿಯದೆಯೋ ತೊಂದರೆಯಾದರೆ ನಾವು ದೊಡ್ಡ ಮನಸ್ಸಿನಿಂದ ಸಹಿಸಿಕೊಳ್ಳಬೇಕು.

ಕೊಟ್ಟೂರಿನ ಹತ್ತಿರ ಐನಳ್ಳಿ ಎಂಬ ಊರಲ್ಲಿ ಕಂದಗಲ್ಲ ಹಣಮಂತರಾಯರ 'ಮಾತಂಗ ಕನ್ಯಾ' ಎಂಬ ನಾಟಕ ಪ್ರದರ್ಶನ ನಡೆದಿತ್ತು. ಆ ನಾಟಕದ ಪಾತ್ರವೊಂದರಲ್ಲಿ ನನ್ನ ತಂದೆ ಒಬ್ಬ ಜೀತದಾಳು. ಶ್ರೀಮಂತನೊಬ್ಬ ಒಮ್ಮೆ ನನ್ನ ತಂದೆಯನ್ನು ಚಾಟಿಯಿಂದ ಹೊಡೆಯಬೇಕು, ಬಿಡಿಸಿಕೊಳ್ಳಲು



ಹೋದ ನನ್ನನ್ನೂ ಹೊಡೆಯಬೇಕು. ಆದರೆ ಆ ಪಾತ್ರಧಾರಿ ನಟನೆಯ ಭಾವಾವೇಶದಲ್ಲಿ ಚಾಟಿಯಿಂದ ನನಗೆ ಬಲವಾಗಿಯೇ ಹೊಡೆದುಬಿಟ್ಟ. ನನ್ನ ಕೈಯೆಲ್ಲಾ ರಕ್ತಮಯವಾಗಿ ಬೆರಳು ತಟಸ್ಥವಾಗಿಬಿಟ್ಟಿತು. ಮತ್ತೊಂದು ಪ್ರಸಂಗ 'ರಕ್ಷಾ ಬಂಧನ' ಎಂಬ ನಾಟಕದಲ್ಲಿ ಅಣ್ಣನ ಪಾತ್ರಧಾರಿಯಾಗಿದ್ದ ಹವ್ಯಾಸಿ ಕಲಾವಿದ ತಂಗಿಯಾದ ನನಗೆ ಕಪಾಳಕ್ಕೆ ಹೊಡೆಯುವ ಸನ್ನಿವೇಶ ಇತ್ತು. ಆವೇಶದಲ್ಲಿ ಆ ಪಾತ್ರಧಾರಿ ಹೊಡೆದ